## ಅರಿವು ಮುಖ್ಯ

'ಸಾಮಾನ್ಯವಾಗಿ ಮೆಳ್ಳೆಗಣ್ಣನ್ನು ಸುಲಭವಾಗಿ ಗುರುತಿಸಬಹುದು. ಕೆಲವು ಪ್ರಕರಣಗಳಲ್ಲಿ ಗುರುತಿಸುವಿಕೆ ಕೊಂಚ ಕಷ್ಟ. ಇದಕ್ಕೆ ತಾಜಾ ಉದಾಹರಣೆ ಫಾತಿಮಾ. ಆಕೆಯಲ್ಲಿ ಸಮಸ್ಯೆ ಮೇಲ್ನೋಟಕ್ಕೆ ಗುರುತಿಸುವುದು ಕಷ್ಟವಾಗಿತ್ತು. ಅನಸ್ತೇಷಿಯ ನೀಡಿದ ಬಳಿಕವೂ ಕೆಲವೊಂದು ಪರೀಕ್ಷೆಗಳನ್ನು ಮಾಡಲಾಗಿತ್ತು. ಆಕೆಯ 'ಸೋಮಾರಿ ಕಣ್ಣು' ಸಮಸ್ಯೆ, ಕಣ್ಣಿನ ಮಾಂಸಖಂಡ ದುರ್ಬಲವಾಗಿರುವ ಸಮಸ್ಯೆ ಗುರುತಿಸಿದ ಬಳಿಕ ಕಣ್ಣಿನ ಅತ್ಯಂತ ಸೂಕ್ಷ್ಮ ಸ್ನಾಯುವನ್ನು ಸರಿಸಿ ಸರ್ಜರಿ ಮಾಡಲಾಗಿತ್ತು. ಇಲ್ಲಿ ವೈದ್ಯರ ಚಾಕಚಕ್ಯತೆ ಹಾಗೂ ಶಸ್ತ್ರಕ್ರಿಯಾ ನೈಪುಣ್ಯ ಕೆಲಸ ಮಾಡುತ್ತದೆ' ಎಂದು ಹೇಳುತ್ತಾರೆ ಅಗರ್‌ವಾಲ್ಸ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಾ ತಜ್ಞರಾಗಿರುವ ಡಾ. ರಘು ನಾಗರಾಜ್.

'ಮಕ್ಕಳಿಗೆ ಕಣ್ಣಿನ ಸಮಸ್ಯೆ ಎದುರಾದ ಕೂಡಲೇ ವೈದ್ಯರನ್ನು ಕಾಣಿ. ಕೆಲವೊಂದು ಜನ್ಮಜಾತ ಸಮಸ್ಯೆಗಳಿಗೂ ಸೂಕ್ತ ಪರಿಹಾರ ಇದೆ. ಅದನ್ನು ಗುರುತಿಸಿ ವೈದ್ಯರು ಚಿಕಿತ್ಸೆ ನೀಡುತ್ತಾರೆ. ಶಾಶ್ವತವಾಗಿ ಕಣ್ಣು ಕಳೆದುಕೊಳ್ಳುವುದಕ್ಕಿಂತ ಅರಿವು, ಜಾಗೃತಿ ಮೂಲಕ ಕಣ್ಣುಗಳನ್ನು ರಕ್ಷಿಸಿಕೊಳ್ಳಬಹುದು. ಹೆತ್ತವರು ಇದನ್ನು ಗಮನಿಸಿ ಮಕ್ಕಳನ್ನು ಕಣ್ಣುಗಳ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಒಳ್ಳೆಯದು' ಎಂಬುದು ಡಾ. ರಘು ಅವರ ಸಲಹೆ.

ಫಾತಿಮಾ ಪ್ರಕರಣದಲ್ಲಿ ಹೀಗಾಗಲಿಲ್ಲ. ಈಕೆ ಸೂಕ್ತ ಸಮಯದಲ್ಲಿ ಸರ್ಜರಿ ಮಾಡಿಸಿಕೊಂಡಿದ್ದರಿಂದ ಬಾಲಕಿಯ ಕಣ್ಣುಗಳು ಸರಿಹೋಗಿವೆ' ಎಂದು ಹೇಳುತ್ತಾರೆ ಡಾ. ಮುರಳೀಧರಕೃಷ್ಣ.

'ಜನ್ಮದಾತ ಸುಪೀರಿಯರ್ ಒಬ್ಲಿಕ್ ಪಾಲ್ಸಿ' ಎಂಬ ಸಮಸ್ಯೆ ನವಜಾತ ಶಿಶುಗಳಲ್ಲಿ ಇದ್ದರೆ ಅದು ಹೆತ್ತವರ ಗಮನಕ್ಕೆ ಬರುವುದಿಲ್ಲ. ಹೀಗಾಗಿ ಅವರು ಚಿಕಿತ್ಸೆಯನ್ನೂ ಕೊಡಿಸುವುದಿಲ್ಲ. ಇದರ ಪರಿಣಾಮ ಮಕ್ಕಳಿಗೆ ಒಂದು ವಸ್ತು ಎರಡೆರಡು ಕಂಡಂತಾಗುವುದು. ಇದು ಮುಂದೆ ಮೆಳ್ಳೆಗಣ್ಣಿನಂತಹ ಸಮಸ್ಯೆಯಿಂದ ಮಗು ಬಳಲುವಂತಾಗುತ್ತದೆ. ವಸ್ತು ಎರಡೆರಡು ಕಾಣುವುದನ್ನು ತಪ್ಪಿಸುವ ಸಲುವಾಗಿ ಮಕ್ಕಳು ತಮ್ಮ ತಲೆಯ ಭಂಗಿಯನ್ನು ನೇರವಾಗಿ ಇಡದೆ ಓರೆಯಾಗಿ ನೋಡುವುದನ್ನು ರೂಢಿಸಿಕೊಳ್ಳುತ್ತಾರೆ. ಇಂಥ ಮಕ್ಕಳನ್ನು ವೈದ್ಯರಲ್ಲಿ ಕರೆದೊಯ್ಯುವುದು ತಡವಾದರೆ ಅಥವಾ ಒಂದು ವೇಳೆ ಶಸ್ತ್ರಚಿಕಿತ್ಸೆ ಅಗತ್ಯವಿದ್ದು ಅದೂ ತಡವಾದರೆ ಮಾಂಸಖಂಡದಲ್ಲಿ ಗಣನೀಯ ಪ್ರಮಾಣದ ಬದಲಾವಣೆಗಳಾಗುತ್ತವೆ. ಇದು ಪರಿಸ್ಥಿತಿಯನ್ನು ಮತ್ತಷ್ಟು ಗಂಭೀರತೆಗೆ ಕೊಂಡೊಯ್ಯುತ್ತದೆ' ಎಂದು ಎಚ್ಚರಿಕೆ ನೀಡುತ್ತಾರೆ ಈ ತಜ್ಞರು. ■

# ಮಕ್ಕಳಲ್ಲಿ ಕ್ಯಾನ್ಸರ್; ನೆರವಿಗೆ ಆನ್‌ಲೈನ್ ಸೇವೆ

ಮಕ್ಕಳಲ್ಲಿ ಈಗೀಗ ಕ್ಯಾನ್ಸರ್ ಕಾಣಿಸಿಕೊಳ್ಳುವುದು ಹೆಚ್ಚಾಗುತ್ತಿದೆ. ಕ್ಯಾನ್ಸರ್ ವಯಸ್ಕರಿಗೆ ಮಾತ್ರ ಬರುತ್ತದೆ ಎಂಬುದು ಮಿಥ್ಯೆ. ಹದಿನೆಂಟು ವರ್ಷದೊಳಗಿನ ಮಕ್ಕಳು ಅನೇಕ ಕಾರಣಗಳಿಂದ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ.

ಭಾರತದಲ್ಲಿ ಸುಮಾರು 50 ಸಾವಿರ ಮಕ್ಕಳು ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ ಎಂಬುದು ಸಮೀಕ್ಷೆಯಿಂದ ಸಾಬೀತಾಗಿದೆ. ಅಚ್ಚರಿಯ ಸಂಗತಿ ಎಂದರೆ ನವಜಾತ ಶಿಶುಗಳಲ್ಲಿ ಕೂಡ ಕ್ಯಾನ್ಸರ್ ಲಕ್ಷಣಗಳು ಈಗೀಗ ಕಾಣಿಸಿಕೊಳ್ಳುತ್ತಿವೆ. ಇದು ಆತಂಕದ ವಿಚಾರ. ಆದರೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡಿದರೆ ಮಕ್ಕಳಲ್ಲಿ ಶೇ.80ರಷ್ಟು ಕ್ಯಾನ್ಸರ್ ಅನ್ನು ಸಂಪೂರ್ಣವಾಗಿ ಗುಣಪಡಿಸಬಹುದು.

### ಲಕ್ಷಣಗಳು



ಸೋಂಕು, ಆಗಾಗ ಜ್ವರ ಬರುವುದು, ವಿಪರೀತ ನಿಶ್ಯಕ್ತಿ ಕ್ಯಾನ್ಸರ್‌ನ ಮುಖ್ಯ ಲಕ್ಷಣ. ರಕ್ತ ಪರೀಕ್ಷೆಯಿಂದ ಕ್ಯಾನ್ಸರ್‌ನ್ನು ಪತ್ತೆಹಚ್ಚಬಹುದು. ಕ್ಯಾನ್ಸರ್ ಕಣಗಳು ಪತ್ತೆಯಾದ ಬಳಿಕ ಕೀಮೊಥೆರಪಿ, ರೇಡಿಯೇಷನ್ ಥೆರಪಿಗಳ ಮೂಲಕ ಚಿಕಿತ್ಸೆ ನೀಡಲಾಗುತ್ತದೆ.

'ಭಾರತದಲ್ಲಿ ಮಕ್ಕಳ ಕ್ಯಾನ್ಸರ್‌ಗೆ ಚಿಕಿತ್ಸೆ ನೀಡುವ ಪ್ರತ್ಯೇಕ ಘಟಕಗಳು ಯಾವುದೇ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಗಳಲ್ಲೂ ಇಲ್ಲ. ಇದಕ್ಕಾಗಿಯೇ onco.com ಎಂಬ ಆನ್‌ಲೈನ್ ಆರೋಗ್ಯ ಸೇವೆ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಕ್ಯಾನ್ಸರ್ ಬಗ್ಗೆ ಸಂಶಯ ಬಂದಕೂಡಲೇ ಈ ಸಂಸ್ಥೆಯನ್ನು ಸಂಪರ್ಕಿಸಿದರೆ ಆರಂಭಿಕ ಚಿಕಿತ್ಸೆಯನ್ನು ಮಕ್ಕಳಿಗೆ ಉಚಿತವಾಗಿ ವ್ಯವಸ್ಥೆ ಮಾಡುತ್ತದೆ. ಮೂರು ವರ್ಷದ ಹಿಂದೆ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ ಮಕ್ಕಳಿಗೆ ವಿಶೇಷ ಚಿಕಿತ್ಸೆ ನೀಡುವಲ್ಲಿ ಸಹಾಯ ಮಾಡುತ್ತದೆ' ಎಂದು ವಿವರ ನೀಡುತ್ತಾರೆ 'ಆಂಕೊ.ಕಾಂನಲ್ಲಿ ವೈದ್ಯರಾಗಿರುವ ಡಾ. ಅಮಿತ್ ಜೊತ್ವಾನಿ.

'ಮಕ್ಕಳಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳುವುದು ವಿರಳವಾದುದೇನಲ್ಲ. ಮಕ್ಕಳಿಗೆ ಸಾಮಾನ್ಯವಾಗಿ ಲುಕೇಮಿಯಾ, ಲಿಂಫೋಮಾ, ಮೆದುಳು ಗಡ್ಡೆ, ಬೆನ್ನುಹುರಿಯಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳಬಹುದು. ಇದಕ್ಕೆ ಜೀನ್‌ಗಳು ಕೂಡ ಕಾರಣವಾಗಬಹುದು' ಎನ್ನುತ್ತಾರೆ ಆನ್‌ಕೊ.ಡಾಟ್‌ಕಾಮ್‌ನ ಸಿಇಒ ರಶ್ಮಿ ಜೈನ್.

'ಭಾರತದಲ್ಲಿ ಪ್ರತಿ ವರ್ಷ ಸಾವಿರಾರು ಮಕ್ಕಳಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಬೆಂಗಳೂರಿನಲ್ಲಿ ಪ್ರತಿ ವರ್ಷ 300 ಮಕ್ಕಳಿಗೆ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಸೂಕ್ತ ಚಿಕಿತ್ಸೆ ನೀಡಿದರೆ ಮಕ್ಕಳು ಕ್ಯಾನ್ಸರ್‌ನಿಂದ ಸಂಪೂರ್ಣ ಗುಣಮುಖರಾಗಬಹುದು. ಇದು ಸಾಂಕ್ರಾಮಿಕ ರೋಗವಲ್ಲ ಮತ್ತು ಒಂದು ಮಗುವಿನಿಂದ ಇನ್ನೊಂದಕ್ಕೆ ಹರಡುವುದಿಲ್ಲ' ಎಂದೂ ಮಾಹಿತಿ ನೀಡುತ್ತಾರೆ ಅವರು.

### ಮಕ್ಕಳಲ್ಲಿ ಕ್ಯಾನ್ಸರ್ ತಡೆ ಹೇಗೆ?

ಮಕ್ಕಳಲ್ಲಿ ಅತಿಯಾಗಿ ಬೊಜ್ಜು ಬರದಂತೆ ತಡೆಯಬೇಕು. ಜಂಕ್ ಫುಡ್, ಫಾಸ್ಟ್‌ಫುಡ್ ತಿನ್ನಿಸುವ ಬದಲು ಆರೋಗ್ಯಕರ ಹಾಗೂ ಅಧಿಕ ಪೌಷ್ಠಿಕಾಂಶಗಳುಳ್ಳ ಆಹಾರ ನೀಡಲು ಆದ್ಯತೆ ನೀಡಿ. ಈ ಮೂಲಕ ನಿಮ್ಮ ಮಕ್ಕಳ ತೂಕವನ್ನು ನಿಭಾಯಿಸಬಹುದು. ಬೊಜ್ಜು ಕ್ಯಾನ್ಸರ್ ಮುಂತಾದ ಕಾಯಿಲೆಗಳಿಗೆ ಕಾರಣವಾಗುತ್ತದೆ. ದೈಹಿಕ ಚಟುವಟಿಕೆ ಹಾಗೂ ವ್ಯಾಯಾಮದಿಂದ ದೇಹವನ್ನು ಸರಿಯಾಗಿ ನಿಯಂತ್ರಣದಲ್ಲಿಡಬಹುದು ಹಾಗೂ ಆರೋಗ್ಯಕರವಾಗಿರಬಹುದು. ಮಕ್ಕಳಲ್ಲಿ ಯಾವುದೇ ಆರೋಗ್ಯ ಸಮಸ್ಯೆ ಕಂಡುಬಂದರೂ ತಕ್ಷಣ ತಜ್ಞ ವೈದ್ಯರನ್ನು ಸಂಪರ್ಕಿಸಬೇಕು.

■ ಯು.ಎ.

ಮಾಹಿತಿಗೆ: 79965 79965